# ನೋಟ್ಸ್

## ಕಲಿಕೆಯ ಅಂತ್ಯವಲ್ಲ, ಆರಂಭ

**ಇಂದು ವಿದ್ಯಾರ್ಥಿಗಳು ಪುಸ್ತಕಕ್ಕಿಂತ ಟಿಪ್ಪಣಿಗೇ ಮಾನ್ಯತೆ ಕೊಡುವುದು, ಶಿಕ್ಷಕರು ಬೋಧನೆಗಿಂತ ಟಿಪ್ಪಣಿ ಬರೆಸುವುದಕ್ಕೇ ಆದ್ಯತೆ ಕೊಡುತ್ತಿರುವುದು ಆತಂಕಕಾರಿ. ಇದು ವಿದ್ಯಾರ್ಥಿಗಳ ನಿರುತ್ಸಾಹ ಮತ್ತು ಆತ್ಮವಿಶ್ವಾಸದ ಕೊರತೆಗೆ ಸ್ಪಷ್ಟ.**

★ ಚಂದ್ರಕುಮಾರ ಸಣ್ಣಮರಡಿ



'ಶೋಭಾ, ನಾನು ನಾಳೆಯಿಂದ ನಾಲ್ಕು ದಿನ ಕಾಲೇಜಿಗೆ ಬರೋಲ್ಲ. ಶುಕ್ರವಾರ ಎಲ್ಲ ನೋಟ್ಸ್‌ಅನ್ನೂ ಮರೆಯದೇ ತಂದುಕೊಡು, ಊರಿಗೆ ಹೊರಟಿದ್ದ ನಿರ್ಮಲಾ ಮನವಿ ಮಾಡಿಕೊಳ್ಳುತ್ತಾಳೆ.

'ನೀನು ಹೇಗೂ ಪ್ರಥಮ ಶ್ರೇಣಿಯಲ್ಲಿ ಪಾಸಾಗ್ತೀಯಾ, ನಂತರ ನಿನ್ನ ನೋಟ್ಸ್‌ನ್ನೆಲ್ಲ ನಮ್ಮ ಪ್ರಜ್ವಲ್‌ಗೆ ಕೊಡ್ತಿಯಾ?' ದೂರಾಲೋಚನೆಯುಳ್ಳ ತಾಯಿ ವರ್ಷ ಮೊದಲೇ ಮಗನಿಗೆ ನೋಟ್ಸ್ ಕಾದಿರಿಸುತ್ತಾಳೆ.

'ಎಲ್ಲರೂ ಪರವಾಗಿಲ್ಲ. ಆದರೆ ಇತಿಹಾಸದ ಉಪನ್ಯಾಸಕರು ಮಾತ್ರ ನೋಟ್ಸ್ ಕೊಡೋದೇ ಇಲ್ಲ' ಈಗತಾನೇ ಕಾಲೇಜಿಗೆ ಸೇರಿದ ಶಶಾಂಕನ ಕೊರಗು.

ಹೀಗೆ ಪ್ರೌಢಶಾಲೆಯಿಂದ ಉನ್ನತ ಶಿಕ್ಷಣದವರೆಗೂ ಚಲಾವಣೆಯಲ್ಲಿರುವುದು 'ನೋಟ್ಸ್'. ಒಂದು ವಿಷಯದ ಬಗ್ಗೆ ವಿಭಿನ್ನ ಪುಸ್ತಕಗಳಿಂದ ಮಾಹಿತಿ ಸಂಗ್ರಹಿಸಿ ಸಂಕ್ಷಿಪ್ತವಾಗಿ ಕ್ರೋಢೀಕರಿಸಿರುವುದೇ ನೋಟ್ಸ್ ಅಥವಾ ಟಿಪ್ಪಣಿ. ವಿದ್ಯಾರ್ಥಿಗೆ ಸ್ಮೃತಿಯಲ್ಲುಳಿಯಲಿ ಅಥವಾ ಅರ್ಥ ಮಾಡಿಕೊಳ್ಳಲಿ, ಸುಲಭವಾಗಲಿ ಎಂಬ ಉದ್ದೇಶದಿಂದ ಟಿಪ್ಪಣಿ ಬರೆಸುವ ಪದ್ಧತಿಯನ್ನು ಶಿಕ್ಷಕರು ಪ್ರಾರಂಭಿಸಿದರು. ಆದರೆ ಇಂದು ವಿದ್ಯಾರ್ಥಿ ಪುಸ್ತಕಕ್ಕಿಂತ ಟಿಪ್ಪಣಿಗೇ ಮಾನ್ಯತೆ ಕೊಡುವುದು ಶಿಕ್ಷಕರು ಬೋಧನೆಗಿಂತ ಟಿಪ್ಪಣಿ ಬರೆಸುವುದಕ್ಕೇ ಆದ್ಯತೆ ಕೊಡುತ್ತಿರುವುದು ಆತಂಕಕಾರಿ. 'ಬೋಧನೆ ಅಥವಾ ಟಿಪ್ಪಣಿ ಒಂದನ್ನು ಆಯ್ಕೆಮಾಡಿಕೊಳ್ಳಿ' ಎಂದು ಶಿಕ್ಷಕರು ತರಗತಿಯಲ್ಲಿ ಹೇಳಿದರೆ ಇಂದಿನ ವಿದ್ಯಾರ್ಥಿಗಳು ಒಕ್ಕೊರಲಿನಿಂದ ಟಿಪ್ಪಣಿ ಬರೆಸಿ ಎನ್ನುತ್ತಾರೆ. ಇದು ವಿದ್ಯಾರ್ಥಿಗಳ ನಿರುತ್ಸಾಹ ಮತ್ತು ಆತ್ಮವಿಶ್ವಾಸದ ಕೊರತೆಗೆ ಸ್ಪಷ್ಟ ಸಾಕ್ಷಿ. ಅಷ್ಟೇ ಅಲ್ಲ. ಶಿಕ್ಷಕರು ವಿದ್ಯಾರ್ಥಿಗಳ ಹಾದಿ ತಪ್ಪಿಸುವ ವಿಧಾನ ಕೂಡ! ನಿಜ, ಇಂದು ವಿದ್ಯಾರ್ಥಿಗಳ ದೌರ್ಬಲ್ಯ ಹೆಚ್ಚಿಸುತ್ತ ಎಷ್ಟೋ ವರ್ಷಗಳ ಹಿಂದೆ ತಯಾರಿಸಿದ ಟಿಪ್ಪಣಿ ಬರೆಸಿಯೇ ವರ್ಷ ಕಳೆಯುವ ಉಪನ್ಯಾಸಕರು ಎಷ್ಟಿಲ್ಲ ಹೇಳಿ. ಕೆಲವರಂತೂ ಟಿಪ್ಪಣಿಯನ್ನೇ ಯಥಾವತ್ತಾಗಿ ಬರೆದರೆ ಮಾತ್ರ (ಸರಿಯಿರಲಿ, ತಪ್ಪಿರಲಿ) ಅಂಕ ಕೊಡುವುದು ಈ ದೋಷವೇ ವಿದ್ಯಾಥಿಗಳು ನೋಟ್ಸ್‌ಅನ್ನು ಅವಲಂಬಿಸಲು ಮುಖ್ಯ ಕಾರಣ.

ಹೀಗೆ ಶಿಕ್ಷಕ ನೋಟ್ಸ್‌ನ ಅಡಿಯಾಳಾದಾಗ ವಿದ್ಯಾರ್ಥಿಯ ಕಲಿಕೆಯ ಮೇಲಾಗುವ ನಕಾರಾತ್ಮಕ ಪರಿಣಾಮಗಳು ಹಲವು.

* ವಿದ್ಯಾರ್ಥಿ ನೋಟ್ಸ್‌ನ ಕಟ್ಟಾ ಅನುಯಾಯಿಯಾಗಿ ಸ್ವಂತಿಕೆ, ಸೃಜನಶೀಲತೆ ಕಳೆದುಕೊಳ್ಳುತ್ತಾನೆ.
* ಪಠ್ಯಪುಸ್ತಕ ಓದುವ ಸಂಸ್ಕೃತಿಯೇ ಮಾಯವಾಗುತ್ತದೆ.
* ನೋಟ್ಸ್‌ನ ಅಲ್ಪ ವಿಷಯದಲ್ಲಿ ಸಂತೃಪ್ತರಾಗುವುದರಿಂದ ವಿಷಯಜ್ಞಾನ ಅಪೂರ್ಣವಾಗುತ್ತದೆ.
*

ಬೋಧನೆ ಪರಿಣಾಮಕಾರಿಯಾಗುವುದಿಲ್ಲ.

* ಕಂಠಪಾಠ ಮಾಡಿ ಪರೀಕ್ಷೆ ಬರೆಯುವುದು ರೂಢಿಯಾಗಿ ವಿಷಯ ಪ್ರಭುತ್ವ ಗೌಣವಾಗುತ್ತದೆ.
* ತರಗತಿಗೆ ಬರದೇ ಟಿಪ್ಪಣಿಯನ್ನಷ್ಟೇ ಜೆರಾಕ್ಸ್ ಮಾಡಿಸಿಕೊಂಡು ಸಮಯ ವ್ಯಯಿಸುತ್ತಾರೆ.
* ಒಟ್ಟಾರೆ ಕಲಿಕೆ ದೋಷಮಯವೂ, ಅಪೂರ್ಣವೂ ಆಗುತ್ತದೆ.

ಹೀಗೆ ಟಿಪ್ಪಣಿಯು ವಿದ್ಯಾರ್ಥಿಯ ವಿಕಾಸಕ್ಕೆ ಮಾರಕವಾಗುವುದೇ ಹೆಚ್ಚು ಯಾವುದೇ ಒಬ್ಬ ಶ್ರದ್ಧಾವಂತ, ಬುದ್ಧಿವಂತ ವಿದ್ಯಾರ್ಥಿ ಅನ್ಯರ ಟಿಪ್ಪಣಿಗೆ ಮಾರುಹೋಗದೆ ಪುಸ್ತಕ ಅವಲೋಕಿಸಿ ಬೋಧನೆ ಆಲಿಸಿ ಸ್ವತಃ ಟಿಪ್ಪಣಿ ಸಿದ್ಧಪಡಿಸಿಕೊಂಡಿರುತ್ತಾನೆ. ಅದಕ್ಕೆ ಶಿಕ್ಷಕರು ಕೊಟ್ಟ ಟಿಪ್ಪಣಿ ಸಹಾಯಕವಾಗಬಹುದಷ್ಟೇ.

ಆದುದರಿಂದ ವಿದ್ಯಾರ್ಥಿಗಳೇ, ಶಿಕ್ಷಕರು ಕೊಡುವ ಟಿಪ್ಪಣಿಗೆ ದಾಸರಾಗುವ ಅಭ್ಯಾಸವನ್ನು ಈಗಲೇ ಕೈಬಿಡಿ. ನಿಮ್ಮ ಕಲಿಕಾ ಉತ್ಸಾಹ, ಜ್ಞಾನದಾಹ ಟಿಪ್ಪಣಿಯಿಂದ ತೃಪ್ತವಾಗಬಾರದು. ಅದು ನಿಮಗೆ ದಾರಿದೀಪವಷ್ಟೇ. ಅದರ ನೆರವಿನಿಂದ ವಿಷಯ ಅರ್ಥೈಸಿಕೊಂಡು ಪುಸ್ತಕಗಳನ್ನು ಓದಿ ನಿಮ್ಮಲ್ಲಡಗಿರುವ ಕೌಶಲಗಳಿಂದ ಸ್ವಯಂ ಟಿಪ್ಪಣಿ ಸಿದ್ಧಪಡಿಸಿಕೊಳ್ಳಿ. ಪ್ರತಿನಿತ್ಯ ಪ್ರಾಮಾಣಿಕವಾಗಿ ಓದಿನಲ್ಲಿ ತೊಡಗಿಸಿಕೊಳ್ಳಿ. ಆಗ ನಿಮಗೆ ಪೂರ್ಣ ವಿಷಯ ಮನದಟ್ಟಾಗುತ್ತದೆ ಹಾಗೂ ಸದಾ ಸ್ಮರಣೆಯಲ್ಲಿರುತ್ತದೆ. ಪರೀಕ್ಷೆ ಎದುರಿಸುವ ಧೈರ್ಯ, ಆತ್ಮವಿಶ್ವಾಸ ನಿಮಗರಿವಿಲ್ಲದೆಯೇ ಪುಟಿದೇಳುತ್ತದೆ. ಇದರಿಂದ ನಿಮ್ಮ ಕಲಿಕೆ ಅರ್ಥಪೂರ್ಣವಾಗುತ್ತದೆ ಮತ್ತು ಪರಿಪಕ್ವವಾಗುತ್ತದೆ. ಆದ್ದರಿಂದ ನೆನಪಿಡಿ ನೋಟ್ಸ್‌ನಿಂದ ನಿಮ್ಮ ಕಲಿಕೆ ಆರಂಭವಾಗಬೇಕು; ಅಂತ್ಯವಾಗಬಾರದು. ■